# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 253
ಸದಸ್ಯರ ಹೆಸರು : ಡಾ. ಎಂ ಜಿ ಮುಳೆ (ವಿಧಾನ ಸಭಾ ಕ್ಷೇತ್ರ)
ಉತ್ತರಿಸುವ ದಿನಾಂಕ : 09/12/2025
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಮೇಲ್ದರ್ಜೆಗೇರಿಸಿರುವ ಸ್ಥಳೀಯ ಸಂಸ್ಥೆಗಳ ವಿವರ ಒದಗಿಸುವುದು; | ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 261 ಎಂಎಲ್ ಆರ್ 2022; ದಿನಾಂಕ:15/04/2025 ರನ್ವಯ ಬೀದರ್ ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ರಚಿಸಲಾಗಿರುತ್ತದೆ. |
| ಆ) | ಸದರಿ ಮೇಲ್ದರ್ಜೆಗೇರಿಸಿದ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು; ಅನುದಾನದ ವಿವರಗಳನ್ನು ಸಂಪೂರ್ಣ ಅಂಕಿ ಅಂಶಗಳೊಂದಿಗೆ ನೀಡುವುದು? | **ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ:**<br>**ಎಸ್.ಎಫ್.ಸಿ:**<br>ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಮೇಲ್ದರ್ಜೆಗೇರಿಸಿರುವ ಸ್ಥಳೀಯ ಸಂಸ್ಥೆಗಳಿಗೆ ವಿವಿಧ ಯೋಜನೆಗಳಡಿ ಎಸ್.ಎಫ್.ಸಿ ಕುಡಿಯುವ ನೀರು ಅನುದಾನ, ಎಸ್.ಎಫ್.ಸಿ ಮುಕ್ತನಿಧಿ ಅನುದಾನ ಹಾಗೂ ಎಸ್.ಎಫ್.ಸಿ ವಿಶೇಷ ಅನುದಾನಗಳ ಯೋಜನೆಯಲ್ಲಿ ಹಂಚಿಕೆ ಮಾಡಲಾದ ಹಾಗೂ ಬಿಡುಗಡೆಯಾದ ಅನುದಾನದ ವಿವರ **ಅನುಬಂಧ-1** ರಲ್ಲಿ ಒದಗಿಸಿದೆ.<br>**15ನೇ ಹಣಕಾಸು ಆಯೋಗ:**<br>ಬೀದರ್ ಮಹಾನಗರಪಾಲಿಕೆಗೆ ಮೇಲ್ದರ್ಜೆಗೇರಿಸಿದ ನಂತರ ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದಿಂದ 2025-26ನೇ ಸಾಲಿಗೆ ಮುಕ್ತ ಅನುದಾನ ರೂ.425.60 ಲಕ್ಷಗಳು ಮತ್ತು ನಿರ್ಬಂಧಿತ ಅನುದಾನ ರೂ.638.42 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು ಅನುದಾನ ಬಿಡುಗಡೆಯಾಗಿರುವುದಿಲ್ಲ.<br>**ಅಮೃತ್ 2.0 ಯೋಜನೆ**<br>ಅಮೃತ್ 2.0 ಯೋಜನೆಯಡಿ ಬೀದರ್ ಮಹಾನಗರಪಾಲಿಕೆಗೆ 2024-25 ನೇ ಸಾಲಿನಲ್ಲಿ 08 ಜಲಮೂಲಗಳ ಪುನಃಶ್ಚೇತನ ಹಾಗೂ 19 ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ ಕಾಮಗಾರಿ ಕ್ರಿಯಾ ಯೋಜನೆಗಳು ಅನುಮೋದನೆಗೊಂಡಿದ್ದು, ನಗರ/ಪಟ್ಟಣಗಳ ರಾಜ್ಯ ಜಲ ಕ್ರಿಯಾ ಯೋಜನೆ (SWAP Tranche-3) ರೂ. 63.15 ಕೋಟಿಗಳಿಗೆ (O&M ಸೇರಿದಂತೆ) Apex Committee ಯಿಂದ ಅನುಮೋದನೆ ಪಡೆಯಲಾಗಿದ್ದು ಅನುದಾನ ಬಿಡುಗಡೆಯಾಗಿರುವುದಿಲ್ಲ.<br>**ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ** ಬೀದರ್ ಮಹಾನಗರ ಪಾಲಿಕೆಗೆ ಮೊತ್ತ ರೂ.200.00 ಕೋಟಿಗಳ ಅನುದಾನವನ್ನು ಕೋರಿ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸ್ವೀಕೃತವಾಗಿದ್ದು, ಅದನ್ನು ಆರ್ಥಿಕ ಇಲಾಖೆಯ ಹಿಂಬರಹದ ಪತ್ರ ಸಂಖ್ಯೆ ಆಇ 698 ವೆಚ್ಚ-9/2024, ದಿನಾಂಕ:16-11-2025ರಲ್ಲಿ ಈ |

ಪ್ರಸ್ತಾವನೆಯನ್ನು 2026-27 ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸುವಂತೆ ತಿಳಿಸಿರುತ್ತಾರೆಂದು ಸರ್ಕಾರದ ಪತ್ರ ಸಂಖ್ಯೆ: ನಅಇ/140/ಎಸ್.ಎಫ್.ಸಿ/2024, ದಿನಾಂಕ: 24-11-2025 ರಲ್ಲಿ ತಿಳಿಸಲಾಗಿರುತ್ತದೆ.

**ಸ್ವಚ್ಛ ಭಾರತ ಮಿಷನ್:**

ಬೀದರ್ ನಗರಸಭೆಯನ್ನು ಮಹಾನಗರಪಾಲಿಕೆಯಾಗಿ ಬೀದರ್ ಮಹಾನಗರ ಪಾಲಿಕೆಗೆ ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ವಿವಿಧ ಘಟಕಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ:

(ರೂ ಲಕ್ಷಗಳಲ್ಲಿ)

| ಕ್ರ ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಘಟಕ | ಬಿಡುಗಡೆ ಮಾಡಲಾದ ಅನುದಾನ |
|---|---|---|---|
| 1 | ಬೀದರ್ ಮಹಾನಗರ ಪಾಲಿಕೆ | ಸುಸ್ಥಿರ ನೈರ್ಮಲ್ಯ | 13.75 |
| | | ಘನತ್ಯಾಜ್ಯ ವಸ್ತು ನಿರ್ವಹಣೆ | 254.60 |
| | | ಐ.ಇ.ಸಿ | 31.99 |
| | | ಸಾಮಾರ್ಥ್ಯ ಅಭಿವೃದ್ಧಿ | 5.01 |
| | | ಒಟ್ಟು | **305.35** |

ಬೀದರ್ ನಗರಸಭೆಯನ್ನು ಮಹಾನಗರಪಾಲಿಕೆಯಾಗಿ ಮೆಲ್ದರ್ಜೆಗೇರಿಸಲಾಗಿರುತ್ತದೆ. ಬೀದರ್ ಮಹಾನಗರ ಪಾಲಿಕೆಗೆ ಎಸ್.ಎಫ್.ಸಿ ವೇತನ, ಬೀದಿ ದೀಪಗಳು, ನೀರು ಸರಬರಾಜು, ಎಸ್.ಎಫ್.ಸಿ ಮುಕ್ತ ನಿಧಿ, 15ನೇ ಹಣಕಾಸು, ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ:

(ರೂ ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಗಳ ಹೆಸರು | ಬೀದರ ನಗರಸಭೆ | |
|---|---|---|---|
| | | 2023-24 | 2024-25 |
| 1 | ಎಸ್.ಎಫ್.ಸಿ ವೇತನ, | 1116.00 | 1130.00 |
| 2 | ವಿದ್ಯುಚ್ಛಕ್ತಿ ಬೀದಿ ದೀಪಗಳು | 691.00 | 894.00 |
| 3 | ನೀರು ಸರಬರಾಜು | 814.00 | 355.00 |
| 4 | ಎಸ್.ಎಫ್.ಸಿ ಮುಕ್ತ ನಿಧಿ | 456.00 | 372.00 |
| 5 | 15ನೇ ಹಣಕಾಸು | 992.00 | 522.00 |
| | ಒಟ್ಟು | **4069.00** | **3273.00** |

ಸಂಖ್ಯೆ:ನಅಇ 47 ಎಲ್‌ಸಿಕ್ಯೂ 2025

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

| ABSTRACT REPORT | | | | | | | | | | | |
|---|---|---|---|---|---|---|---|---|---|---|---|
| SFC Drinking Water PROGRAMME | | | | | | | | | | | |
| | | | | | | | | | | | Rs in Lakhs |
| SL. NO | District | Name Of the Town | ULB Type | Year | Grants Allocation | Grants Released | Expenditure | Total Approved Works | Completed Works | Works Started/Ongoing | Under Tender Process/Tender to be Invited |
| 1 | Bidar | Bidar | CMC | 2023-24 | 8.23 | 8.23 | 7.14 | 2 | 2 | 0 | 0 |
| | | | | Total | 8.23 | 8.23 | 7.14 | 2 | 2 | 0 | 0 |
| 1 | Bidar | Bidar | CMC | 2024-25 | 9.44 | 9.44 | 9.42 | 2 | 2 | 0 | 0 |
| | | | | Total | 9.44 | 9.44 | 9.42 | 2 | 2 | 0 | 0 |

| ABSTRACT REPORT | | | | | | | | | | | |
|---|---|---|---|---|---|---|---|---|---|---|---|
| SFC UNTIED PROGRAMME | | | | | | | | | | | |
| | | | | | | | | | | | Rs in Lakhs |
| SL.NO | District | Name Of the Town | ULB Type | Year | Grants Allocation | Grants Released | Expenditure | Total Approved Works | Completed Works | Works Started/Ongoing | Under Tender Process/Tender to be Invited |
| 1 | Bidar | Bidar | CMC | 2023-24 | 456.00 | 390.00 | 354.20 | 32 | 31 | 1 | 0 |
| | | | TOTAL | 2023-24 | 456.00 | 390.00 | 354.20 | 32 | 31 | 1 | 0 |
| 1 | Bidar | Bidar | CMC | 2024-25 | 372.00 | 306.00 | 288.09 | 24 | 21 | 3 | 0 |
| | | | TOTAL | 2024-25 | 372.00 | 306.00 | 288.09 | 24 | 21 | 3 | 0 |

## ABSTRACT REPORT

## SFC Special Grants PROGRAMME

Rs. in Lakhs

| SL NO | District | Name Of the Town | ULB Type | YEAR | Grants Allocation | Grants Released | Expenditure | Total Approved Works | Completed Works | Works Started/Ongoing | Under Tender Process/Tender to be Invited |
|---|---|---|---|---|---|---|---|---|---|---|---|
| 1 | Bidar | Bidar | CMC | 2023-24 | 500.00 | 0.00 | 0.00 | 9 | 0 | 5 | 4 |
| | | Total | | 2023-24 | 500.00 | 0.00 | 0.00 | 9 | 0 | 5 | 4 |
| 1 | Bidar | Bidar | CMC | 2024-25 | 2500.00 | 0.00 | 0.00 | 58 | 0 | 57 | 1 |
| | | | | TOTAL | 3500.00 | 0.00 | 0.00 | 102 | 0 | 57 | 45 |

ಯೋಜನಾಧಿಕಾರಿ
ನಗರ ಬಡತನ ನಿರ್ಮೂಲನಾ ಕೋಶ
ಪೌರಾಡಳಿತ ನಿರ್ದೇಶನಾಲಯ
ಪೋಡಿಯಂ ಬ್ಲಾಕ್ 02ನೇ ಮಹಡಿ
ಡಾ|| ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು - 560 001